ಇಸಿಎ ನಂಃ 20/2023

ಪಿ.ಡಬ್ಲೂ 1

## 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **29.10.2025**

**ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದ**

1. ನಾನು ಈ ಅರ್ಜಿಯನ್ನು ಅಪಘಾತವಾದ ಕಾರಣ ಪರಿಹಾರಕ್ಕಾಗಿ ಸಲ್ಲಿಸಿರುತ್ತೇನೆ. ನನ್ನ ಗಂಡ ಆರುವರೆ ವರುಷದಿಂದ ಕೆಲಸ ಮಾಡುತ್ತಿದ್ದ. ಅವರು ಮರಣ ಹೊಂದುವ ಸಮಯದಲ್ಲಿ ಪ್ರತಿ ತಿಂಗಳು 30 ಸಾವಿರ ವೇತನ ಇತ್ತು. ಸಾಕ್ಷಿ ಮುಂದುವರೆದು ಒಂದು ದಿನಕ್ಕೆ ರೂ.600/- ಭತ್ಯ ಕೊಡುತ್ತಿದ್ದರು ಎನ್ನುತ್ತಾರೆ. ನನ್ನ ಗಂಡ ಎದುರುದಾರರ ಜೊತೆ ಎಷ್ಟು ವರುಷದಿಂದ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ 6 ವರುಷದಿಂದ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ನನ್ನ ಪ್ರಕಾರ ನನ್ನ ಗಂಡ ಕೆಲಸ ಪ್ರಾರಂಬ ಮಾಡಿದಾಗಿನಿಂದ ಎದುರುದಾರರ ಜೊತೆ ಕೆಲಸ ಮಾಡುತ್ತಿದ್ದ ಎಂದರೆ ಸರಿ. ನನ್ನ ಗಂಡ ಎದುರುದಾರರ ಜೊತೆ ಕೆಲಸ ಮಾಡುತಿತದ್ದ ಎಂದು ಹೇಳಲು ದಾಖಲೆ ಹಾಜರು ಮಾಡಿಲ್ಲ. ನನ್ನ ಗಂಡ ಎದುರುದಾರರ ಜೊತೆ 6-7 ವರುಷದಿಂದ ಕೆಲಸ ಮಾಡಿದ ಬಗ್ಗೆ ವೇತನ ಪಡೆದಿರುತ್ತಾರೆ. ಸದರಿ ವೇತನ ಪಡೆದ ಬಗ್ಗೆ ಬ್ಯಾಂಕ ಪಾಸಪುಸ್ತಕ ದಾಖಲೆ ಹಾಜರು ಮಾಡಿಲ್ಲ. ನನ್ನ ಗಂಡ ಎದುರುದಾರರ ಬಳಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನ್ನ ಗಂಡ ಕೆಲಸ ಮಾಡುತಿತದ್ದ ಮಾಲೀಕರ

ಇಸಿಎ ನಂಃ 20/2023

ಪಿ.ಡಬ್ಲೂ 1

ಹೆಸರು ನೆನಪಿಲ್ಲ ಅವರ ಹೆಸರನ್ನು ಅರ್ಜಿಯಲ್ಲಿ ಬರೆಸಿರುತ್ತೇನೆ. ಸಾಕ್ಷಿ ಮುಂದುವರೆದು ಸತ್ತೂರಿನಿಂದ ಟ್ರಾಕ್ಟರ್ ತೆಗೆದುಕೊಂಡು ಶೂ ರೂಂಗೆ ಬಿಡುತ್ತಿದ್ದ ಎನ್ನುತ್ತಾರೆ. ಅಪಘಾತವಾದ ಸಮಯದಲ್ಲಿ ನನ್ನ ಗಂಡ 2 ಟ್ರಾಕ್ಟರ್ ಇಂಜಿನಗಳನ್ನು ತೆಗೆದುಕೊಂಡು ಹೊಗುತ್ತಿದ್ದ. ಎರಡು ಇಂಜಿನಗಳನ್ನು ಆತ ಒಬ್ಬನೇ ತೆಗೆದುಕೊಂಡು ಹೊಗುತ್ತಿದ್ದ. ಸದರಿ ಇಂಜಿನಗಳನ್ನು ಒಂದಕ್ಕೊಂದು ಜ್ವಾಂಟ ಮಾಡಿ ತೆಗೆದುಕೊಂಡು ಹೊಗುತ್ತಿದ್ದನು.

2. ಸದರಿ ಅಪಘಾತ ನನ್ನ ಗಂಡನ ನಿರ್ಲಕ್ಷತನದಿಂದ ಆಗಿದೆ ಎಂದರೆ ಸರಿಯಲ್ಲ. ನನ್ನ ಗಂಡ ಎದುರುದಾರರ ಜೊತೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆ ಸೃಷ್ಟಿಸಿ ಪರಿಹಾರ ಪಡೆದುಕೊಳ್ಳಲು ಸುಳ್ಳು ಅರ್ಜಿ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾಹಾಗೂ ಜೆಎಂಎಫ್‌ಸಿ,
ಧಾರವಾಡ.

ಇಸಿಎ ನಂಃ 20/2023

ಪಿ.ಡಬ್ಲೂ 1